ಅಪರ  ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ.ಸಿ.ನಂ. 3810-2022

ಸಿ.ಡಬ್ಲ್ಯೂ.-06
ಪಿ.ಡಬ್ಲ್ಯೂ-06

ಸಾಕ್ಷಿದಾರನ ಹೆಸರು  :-  ಗೀರಿಶ್

ತಂದೆಯ   ಹೆಸರು    :- ವೆಂಕಟೇಶ್

ವಯಸ್ಸು  :-  32 ವರ್ಷ

ಉದ್ಯೋಗ  :-  ವ್ಯವಸಾಯ

ವಾಸ  :-  ಮೆಣಸಿಗೆರೆ ದೊಡ್ಡಿ

**ಸಾಕ್ಷಿಗೆ ದಿಃ 07.07.2025 ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ಆರೋಪಿತರು ನನಗೆ ಗೊತ್ತು. 2022 ರಲ್ಲಿ ನಾನು ನಮ್ಮ ಜಮೀನಿನಲ್ಲಿದ್ದಾಗ ಚಾಸಾ 2 ಅವರ ಮನೆಯ ಹತ್ತಿರ ಗಲಾಟೆ ಆಗುತ್ತಿತ್ತು. ಆರೋಪಿ 1, 2 ಮತ್ತು 5 ಅಲ್ಲಿಗೆ ಬಂದಿದ್ದರು ಅವರೊಂದಿಗೆ ಉಳಿದ ಜನ ಸಹ ಇದ್ದರು ಅವರ ಹೆಸರು ನನಗೆ ಗೊತ್ತಿಲ್ಲ. ಆರೋಪಿಗಳು ಜೆ.ಸಿ.ಬಿ ಎನ್ನು ಸಹ ತಂದಿದ್ದರು. ಜೆ.ಸಿ.ಬಿ ಯಿಂದ ಕೆಲಸ ಮಾಡುವಾಗ ಮನೆಯನ್ನು ಕೆಡವಿರುತ್ತಾರೆ.  ಗಲಾಟೆಯಲ್ಲಿ ಚಾಸಾ 1 ಮತ್ತು 2 ಹಾಗೂ ಇನ್ನೂ ಇಬ್ಬರು ಹೆಣ್ಣು ಮಕ್ಕಳಿಗೆ ಗಾಯವಾಗಿರುತ್ತದೆ. ನಾನು ಹೋಲದಿಂದ ಹೋಗುವಷ್ಟರಲ್ಲಿ ಬಿದ್ದು ಹೋಗಿರುತ್ತಾರೆ ಯಾರು ಹೊಡೆದಿರುತ್ತಾರೆಂದು ನನೆ ಗೊತ್ತಿಲ್ಲ. ನಾನು ಅವರಿಗೆ ವಿಚಾರಿಸಲಾಗಿ ಅವರು ಏನು ಹೇಳಿರುವುದಿಲ್ಲ ಬಾಯಿ ಮಾತಿನಿಂದ ಬೈದಾಡಿಕೊಂಡು ಹೋಗಿರುತ್ತಾರೆ. ನಂತರ ಪೋಲಿಸ ಸ್ಥಳಕ್ಕೆ ಬಂದಿದ್ದು ಗಾಯಾಳುಗಳನ್ನು ಕರೆದುಕೊಂಡು ಹೋಗಿ ಆಸ್ಪತ್ರೆಗೆ ಸೇರಿಸಿರುತ್ತಾರೆ. ಚಾಸಾ 2 ಅವರಿಗೆ ತೊಡೆಗೆ, ಬಲಗೈಗೆ ಏಟು ಬಿದಿದ್ದು ಚಾಸಾ 1 ಅವರಿಗೆ ಹಿಮ್ಮಡಿಗೆ ಏಟು ಬಿದಿತ್ತು.

ಚಾಸಾ 2 ಅವರಿಗೆ ತೊಡೆಗೆ ಕಲ್ಲಿನಿಂದ ಹೊಡೆದಿರುತ್ತಾರೆ. ಮು. ಮಾ. ಗಳನ್ನು ಗುರುತಿಸುತ್ತೇನೆ.

**(ಈ ಹಂತದಲ್ಲಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಬಾಗಶಃ  ಪ್ರತಿಕೂಲ ಸಾಕ್ಷಿಯೆಂದು  ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು ಅನುಮತಿ ನೀಡಿಲಾಗಿದೆ. )**

**ಪಾಟೀ ಸವಾಲುಃ ಸಹಾಯಕ ಅಭಿಯೋಜಕರಿಂದಃ**

ದಿಃ 29.03.2022 ರಂದು ಮದ್ಯಾಹ್ನ 12.30 ಗಂಟೆಯ ಸಮಯದಲ್ಲಿ ನಾನು

ಚಾಸಾ 2 ಅವರನ್ನು ಮಾತನಾಡಿಸಲು ಹೋಗಿದ್ದಾಗ ಆರೋಪಿತರು ಜೆ.ಸಿ.ಬಿ ಯನ್ನು ತಗೆದುಕೊಂಡು ಚಾಸಾ 2 ಅವರ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿರುತ್ತಾರೆ ಎಂದರೆ ಸರಿ. ಚಾಸಾ 2 ಅವರ ಅಣ್ಣ ಕಟ್ಟಿರುವ ನೀರಿನ ತೊಟ್ಟಿಯನ್ನು ಸಹ ಹೊಡೆದುಹಾಕಿರುತ್ತಾರೆ ಎಂದರೆ ಸರಿ. ಚಾಸಾ 1 ಮತ್ತು 2 ಅವರು ಯಾಕೆ ಹೀಗೆ ಮಾಡುತ್ತೀದ್ದೀರಾ ಎಂದು ಕೇಳಿದಕ್ಕೆ ಆರೋಪಿತರು ಚಾಸಾ 1 ಅವರು ಉಟ್ಟುಕೊಂಡಿದ್ದು ಸೀರೆಯನ್ನು ಹಿಡಿದು ಎಳೆದು ಅವಮಾನ ಮಾಡಿರುತ್ತಾರೆ ಎಂದರೆ ಸರಿ. ಶಂಕರಯ್ಯ ಅವರು ಅಲ್ಲೆ ಬಿದ್ದಿದ್ದ ಕಲ್ಲಿನಿಂದ ಚಾಸಾ 1 ಅವರ ಬಲಗಾಲ ಮಂಡಿಗೆ ಮತ್ತು ಬಲಗಡೆ ಬುಜದ ಬೆನ್ನಿಗೂ ಹೊಡೆದಿರುತ್ತಾರೆ ಎಂದರೆ ಸರಿ. ಆರೋಪಿ 5 ಚಾಸಾ 1 ಅವರು ಮೈಕೈಗೆ ಕೈಯಿಂದ ಹೊಡೆದಿರುತ್ತಾನೆ ಎಂದರೆ ಸರಿ. ಆರೋಪಿ 1 ಮತ್ತು 2 ಚಾಸಾ 1 ಅವರ ಎಡ ಮತ್ತು ಬಲ ತೊಡೆಯ ಸಂದಿಗೆ ಹೊಡೆದಿರುತ್ತಾರೆ ಎಂದರೆ ಸರಿ. ಆರೋಪಿ 1 ಚಾಸಾ 2 ಅವರ ಕಲ್ಲಿನಿಂದ 2 ಕೈಗಳಿಗೆ ಹೊಡೆದಿರುತ್ತಾರೆ ಎಂದರೆ ಸರಿ. ಚಾಸಾ 3 ಅವರು ಜಗಳ ಬಿಡಿಸಲು ಬಂದಾಗ ಅವರಿಗೂ ಸಹ ಆರೋಪಿ 2 ಅವಾಚ್ಯ ಶಬ್ದಗಳಿಂದ ಬೈದು ಬಲಕಿವಿಯ ಬಳಿ ಕಲ್ಲಿನಿಂದ ಹೊಡೆದಿರುತ್ತಾರೆ ಎಂದರೆ ಸರಿ. ಬೋರಮ್ಮಾ ಅವರು ಬಿದ್ದಾಗ ಕಾಲೆನಿಂದ ಹೊಟ್ಟೆಯ ಮೇಲೆ ಸೊಂಟದ ಮೇಲೆ ಮೊಣಕಾಲಿನ ಮೇಲೆ ತುಳಿದಿರುತ್ತಾರೆ ಎಂದರೆ ಸರಿ.

ಆರೋಪಿತರ ತಾಯಿ ಜಯಮ್ಮಾ ಇವರು ನಮಗೆ ಜಮೀನಿನಲ್ಲಿ ದಾರಿ ಬಿಡುತ್ತಿಲ್ಲ ಇವರಿಗೆ ಹೊಡೆದು ಕೈಕಾಲು ಮುರಿರೋ ಎಂದು ಕುಮ್ಮಕು ನೀಡುತ್ತಿದ್ದರು ಎಂದರೆ ಸರಿ. ನಾನು ಮತ್ತು ಚಾಸಾ 4 ಹಾಗೂ 5 ಜಗಳ ಬಿಡಿಸಿರುತ್ತೇವೆ ಆಗ ಆರೋಪಿತರು ಕಲ್ಲುಗಳನ್ನು ಅಲ್ಲಿಯೇ ಬಿಸಾಕಿ ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಜೆ.ಸಿ.ಬಿ ಸಂಖ್ಯೆ ಕೆ.ಎ 06-ಜಡ್ 6330 ಆಗಿರುತ್ತದೆ ಎಂದರೆ ಸರಿ.

**ಆರೋಪಿತರ ಪರ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು ಕೋರಿಕೆ ಮೇರೆಗೆ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.